ಸದರಿ ವ್ಯಕ್ತಿಯ ಠಾಣೆಯ ಕಾಂಪೌಂಡ್ ಹೊರಗಡೆ ರಾತ್ರಿ. 10.00 ಗಂಟೆಯವರೆವಿಗೂ ಸುತ್ತಾಡುತ್ತಿದ್ದನು. ನಂತರ ಸದರಿ ವ್ಯಕ್ತಿಯು ಠಾಣೆಯ ಕಾಂಪೌಂಡ್ ಹೊರಗಡೆ ರಾತ್ರಿ. 10.00 ಗಂಟೆಯವರೆವಿಗೂ ಸುತ್ತಾಡುತ್ತಿದ್ದನು. ನಂತರ ರಾತ್ರಿ ಗಸ್ತು ಪೋಲೀಸರು ದಿನಾಂಕ 17-2-1995ರ ಬೆಳಗಿನ ಜಾವ 4 ಗಂಟೆಯಲ್ಲಿ ದೊಡ್ಡಕುಂಟೆ ಪ್ರದೇಶದಲ್ಲಿ ಕುಳಿತ್ತಿದ್ದಾಗ ಅವನನ್ನು ನೋಡಿದ ಪೋಲೀಸ್ ಸಿಬ್ಬಂದಿಯು ಈತನು ಹುಚ್ಚನೆಂದು ತಿಳಿದು ಹೋಗಿರುತ್ತಾರೆ.

ದಿನಾಂಕ 17-2-1995 ರಂದು ಸುಮಾರು ಮಧ್ಯಾಹ್ನ 12 ಗಂಟೆಯಲ್ಲಿ ಶ್ರೀಮತಿ ದೇವಿ ಕೊಂ ಸುಂದರ್, ಮೋತಿಲಾಲ್ ಗಾರ್ಡನ್ (ಕಾಕ್ಸ್‌ಟೌನ್) ಇವರು ಅಪ್ಪಾಜಪ್ಪ ಗಾರ್ಡನ್‌ನಲ್ಲಿ ಬಾವಿಯೊಂದರಲ್ಲಿ ಸುಮಾರು 30-34ರ ವಯಸ್ಸುಳ್ಳ ಒಂದು ಶವವು ತೇಲುತ್ತಿದೆಯೆಂದು ನೀಡಿದ ದೂರಿನ ಮೇರೆಗೆ, ಪ್ರಕರಣವನ್ನು ದಾಖಲು ಮಾಡಿಕೊಂಡು ತನಿಖೆ ನಡೆಸಿರುತ್ತಾರೆ. ಮೃತನ ಸಂಬಂಧಿಕರು ಸದರಿ ಮೃತಪಟ್ಟ ವ್ಯಕ್ತಿ ಗೋಪಾಲಾಕೃಷ್ಣನೆಂದು ಆತನನ್ನು ಪೋಲಿಸರೇ ಕೊಂದು ಬಾವಿಯಲ್ಲಿ ಹಾಕಿರುವಂತೆ ಸಂಶಯಪಟ್ಟಿರುತ್ತಾರೆ. ಆದ್ದರಿಂದ ಈ ಪ್ರಕರಣದ ಮುಂದಿನ ತನಿಖೆಯನ್ನು ಸರ್ಕಾರದ ನೀತಿಯಂತೆ ಸಿಓಡಿಗೆ ವಹಿಸಲಾಗಿದೆ. ಪ್ರಕರಣವು ತನಿಖಾ ಹಂತದಲ್ಲಿರುತ್ತದೆ.

ಬೆಂಗಳೂರು ನಗರದಲ್ಲಿ ಭಾವಚಿತ್ರವುಳ್ಳ ಗುರುತಿನ ಚೀಟಿ ನೀಡುವುದು

52 - ಶ್ರೀ ಆರ್. ಕೃಷ್ಣಪ್ಪ (ಜಹಮಹಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995ರ ಫೆಬ್ರವರಿ ಅಂತ್ಯದವರೆಗೆ ಬೆಂಗಳೂರು ನಗರದಲ್ಲಿ ಎಷ್ಟು ಮತದಾರರ ಭಾವಚಿತ್ರಗಳನ್ನು ತೆಗೆಯಲಾಗಿದೆ? (ಕ್ಷೇತ್ರವಾರು ವಿವರ ನೀಡುವುದು).

ಆ) ಬೆಂಗಳೂರು ನಗರದಲ್ಲಿ ಹಾಲಿ ಮತದಾರರ ಪಟ್ಟಿ ಪ್ರಕಾರ ಮತದಾರರ ಸಂಖ್ಯೆ ಎಷ್ಟು?

ಇ) ಮತದಾರರ ಪಟ್ಟಿಯಲ್ಲಿ ಇಲ್ಲದೆ ಇರುವವರಿಗೆ ಭಾವಚಿತ್ರ ತೆಗೆಯಲು ವಿಶೇಷ ದಿನಗಳನ್ನು ನಿಗಧಿಪಡಿಸಲು ಸರ್ಕಾರದವರು ಪರಿಶೀಲಿಸುವರೇ?

ಈ) ಹಾಗಿದ್ದರೆ, ಭಾವಚಿತ್ರ ತೆಗೆಯುವ ಕಾರ್ಯಕ್ರಮವನ್ನು ಜೂನ್ ಅಂತ್ಯದವರೆಗೆ ವಿಸ್ತರಿಸಲು ಸರ್ಕಾರದವರು ಪರಿಶೀಲಿಸುವರೇ?

ಉ) ಬೆಂಗಳೂರು ನಗರ ಮತದಾರರ ಭಾವಚಿತ್ರ ತೆಗೆಯಲು ಇಲ್ಲಿಯವರೆವಿಗೂ ಖರ್ಚು ಮಾಡಿರುವ ಹಣವೆಷ್ಟು? ಇದರಲ್ಲಿ ಕೇಂದ್ರ ಸರ್ಕಾರದವರು ಒದಗಿಸಿದ ಮೊತ್ತವೆಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 11,26,018 ಮತದಾರರಿಗೆ ಭಾವಚಿತ್ರ ತೆಗೆಯಲಾಗಿದೆ.

ಆ) 17,71,000 ಮತದಾರರು

ಇ) ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ ದಿನಾಂಕ:1-1-1994ಕ್ಕೆ 18 ವರ್ಷ ತುಂಬಿರುವ ಎಲ್ಲ ವಯಸ್ಕರಿಗೂ ಅರ್ಜಿ ನಮೂನೆ 6ನ್ನು ನೀಡಿ ಭಾವಚಿತ್ರ ತೆಗೆಯಲಾಗುತ್ತಿದೆ.

ಈ) ಈ ಬಗ್ಗೆ ನಿರ್ಧಾರವನ್ನು ಚುನಾವಣಾ ಆಯೋಗ ತೆಗೆದುಕೊಳ್ಳಬೇಕಾಗುವುದು. ಎರಡನೇ ಸುತ್ತಿನ ಕಾರ್ಯಕ್ರಮ ಹಾಲಿ ನಡೆಯುತ್ತಿದ್ದು, ಏಪ್ರಿಲ್ ನಂತರವೂ ಮುಂದುವರಿಸಬೇಕೆ ಎಂಬ ವಿಷಯ ಅಂತ್ಯದಲ್ಲಿ ನಿರ್ಧರಿಸಬೇಕಾಗುತ್ತದೆ.

ಉ) ರೂ. 45,56,000 ಭಾವಚಿತ್ರ ಕಾರ್ಯಕ್ಕೆ ತಗಲಿದ ವೆಚ್ಚದ ಅರ್ಧ ಭಾಗದ ಮೊತ್ತವನ್ನು ಕೇಂದ್ರ ಸರ್ಕಾರವು ಭರಿಸುತ್ತದೆ.

ಅನುಬಂಧ

ಬೆಂಗಳೂರು ಮಹಾನಗರ ಪಾಲಿಕೆಯ ವಿಧಾನಸಭಾ ಕ್ಷೇತ್ರವಾರು
ಮತದಾರರ ವಿವರಗಳು

ವಿಧಾನಸಭಾ ಕ್ಷೇತ್ರದ ಹೆಸರು		ಒಟ್ಟು ಮತದಾರರ ಸಂಖ್ಯೆ	ಭಾವಚಿತ್ರ ತೆಗೆಸಿಕೊಂಡ ಒಟ್ಟು ಮತದಾರರ ಸಂಖ್ಯೆ
1.	ಮಲ್ಲೇಶ್ವರಂ	149588	96533
2.	ರಾಜಾಜಿನಗರ	241722	156339
3.	ಗಾಂಧಿನಗರ	103041	70174
4.	ಚಿಕ್ಕಪೇಟೆ	84057	57128
5.	ಬಿನ್ನಿಪೇಟೆ	272899	170142
6.	ಚಾಮರಾಜಪೇಟೆ	94086	57078
7.	ಬಸವನಗುಡಿ	154406	100999
8.	ಜಯನಗರ	213267	124257
9.	ಶಾಂತಿನಗರ	141138	88753
10.	ಶಿವಾಜಿನಗರ	79313	52672
11.	ಭಾರತಿ ನಗರ	108387	68074
12.	ಜಯಮಹಲ್	139297	83869

ಬೆಂಗಳೂರು ನಗರ ನೀರು ಸರಬರಾಜು ಬಗ್ಗೆ

53 - ಶ್ರೀ ಆರ್. ಕೃಷ್ಣಪ್ಪ (ಜಹಮಹಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯವರು ಉಚಿತ ನೀರು ಸರಬರಾಜನ್ನು ಎಂದಿನಿಂದ ನಿಲ್ಲಿಸಿರುವರು?

ಆ) ಹಾಗಿದ್ದಲ್ಲಿ ಇದಕ್ಕೆ ಬದಲಾಗಿ ಬೆಂಗಳೂರು ಮಹಾನಗರ ಪಾಲಿಕೆಯು 140 ರೂಪಾಯಿಗಳನ್ನು ಮನೆ ಕಂದಾಯದಲ್ಲಿ ಕಡಿಮೆ ಮಾಡಿರುವುದು ನಿಜವೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಮಹಾನಗರ ಪಾಲಿಕೆಯು ಉಚಿತ ನೀರು ಸರಬರಾಜನ್ನು ಇಲ್ಲಿಯ ತನಕ ನಿಲ್ಲಿಸಿಲ್ಲ.

ಆ) ಮೇಲಿನ ಉತ್ತರ(ಅ) ನಿಂದಾಗಿ ಉದ್ಭವಿಸುವುದಿಲ್ಲ.